**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

**<u>ಸಿಸಿ ನಂ.1376/2023</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಅಬಕಾರಿ ಪೊಲೀಸ್ ಸೇಡಂ

-ಃಃ ವಿರುದ್ದ ಃಃ-

ಆರೋಪಿ ಃ ಶರಣಪ್ಪ ತಂದೆ ರಾಮಚಂದ್ರ ಅನ್ವಾರ
ವಃ 30 ವರ್ಷ, ಉಃ ಚಾಲಕ
ಸಾಃ ತರನ್ನಳ್ಳಿ ,
ತಾಃ ಸೇಡಂ, ಜಿಃ ಕಲಬುರಗಿ

----

**<u>ದೋಷಾರೋಪಣೆ</u>**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 09-04-2023 ರಂದು ಸಮಯ ಸಾಯಂಕಾಲ 07.30 ಗಂಟೆ ಸುಮಾರಿಗೆ ಚಾಸಾ.1, ಸಿಬ್ಬಂದಿ ಹಾಗೂ ಪಂಚರೊಂದಿಗೆ, ಸೇಡಂ ಶಹರದ ಚಿಂಚೋಳಿ ಕ್ರಾಸನ ಹತ್ತಿರದ ಪೆಟ್ರೋಲ್ ಬಂಕ ಎದುರಿನ ಮುಖ್ಯ ರಸ್ತೆಯಲ್ಲಿ ರಸ್ತೆ ಗಾವಲು ಮಾಡುತ್ತಿರುವಾಗ, ವಾಹನಗಳನ್ನು ತಪಾಸಣೆ ಮಾಡುವ ಸಮಯದಲ್ಲಿ ಒಬ್ಬ ವ್ಯಕ್ತಿಯು ತನ್ನ ದ್ವಿ-ಚಕ್ರ ವಾಹನದ ಮುಂದೆ ಬಿಳಿ ಬಣ್ಣದ ಮೂಟೆಯನ್ನು ಇಟ್ಟಿಕೊಂಡು ಬರುತ್ತಿರುವುದು ಕಂಡು ಸದರಿ ದ್ವಿ-ಚಕ್ರ ವಾಹನ ಸವಾರನಿಗೆ ಕೈ -ಸನ್ನೆ ಮಾಡಿ ವಾಹವನ್ನು ನಿಲ್ಲಿಸಲು ಸೂಚಿಸಿದಾಗ ಸದರಿ ವಾಹನ ಸವಾರನು ಸಮವಸ್ತ್ರಧಾರಿಗಳಾದ ಪೋಲೀಸರನ್ನು ದೂರದಿಂದಲೇ ಕಂಡು ಗಾಬರಿಗೊಂಡು ವಾಹನವನ್ನು ಅಲ್ಲಿಯೇ ಬಿಟ್ಟು ಸ್ಥಳದಿಂದ ಓಡಿಹೋದನು ಸಂಶಯಗೊಂಡ ಪೋಲಿಸರು ವಾಹನವನ್ನು ಪರಿಶೀಲಿಸಲಾಗಿ ನೀಲಿ ಮಿಶ್ರಿತ ಕಪ್ಪು ಬಣ್ಣದ ಹಿರೋ ಫ್ಯಾಷನ್ ಪ್ರೋ ದ್ವಿ-ಚಕ್ರ ವಾಹನ ನೊಂದಣಿ ಸಂಖ್ಯೆ KA 32 EH 6726 ರ ದ್ವಿ-ಚಕ್ರ ವಾಹನದ ಮುಂದೆ ಬಿಳಿ ಬಣ್ಣದ ಪ್ಲಾಸ್ಟಿಕ ಚೀಲವನ್ನು ಶೋಧನೆ ಮಾಡಿದಾಗ 03 ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡು ಬಂದಿದ್ದು ಅವುಗಳನ್ನು ಪರಿಶೀಲಿಸಿದಾಗ ಓರಿಜಿನಲ್ ಚಾಯ್ಸ ವಿಸ್ಕಿ ಹಾಗೂ ಕಿಂಗ್ ಫಿಶರ್ ಸ್ಟಾಂಗ್ ಬಿಯರ ಪತ್ತೆಯಾಗಿದ್ದು ಒಟ್ಟು 17.280 ಲೀ ಸ್ವ-ದೇಶಿ ಮದ್ಯ ಹಾಗೂ 7.920 ಲೀ ಬಿಯರನು ಹೊಂದಿ ರಹದಾರಿ ಪತ್ರವಿಲ್ಲದೆ ಸಾಗಾಣಿಕೆ ಮಾಡುತ್ತಿರುವುದು ಕಂಡು ಬಂದಿದ್ದು, ಸದರಿ ವಾಹನ, ಮದ್ಯವನ್ನು ಜಪ್ತಿ ಮಾಡಿದ್ದು, ಸದರಿ ಮದ್ಯವನ್ನು ರಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಐಎಸ್ಐ ಧೃಢಿಕರಣ ಹೊಂದಿದ್ದು, ಕಾರಣ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 38(A), 43 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 13-03-2026 ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.1376/2023**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಅಬಕಾರಿ ಪೊಲೀಸ್ ಸೇಡಂ

-ಃಃ ವಿರುದ್ದ ಃಃ-

ಆರೋಪಿ ಃ ಶರಣಪ್ಪ ತಂದೆ ರಾಮಚಂದ್ರ ಅನ್ವಾರ
ವಃ 30 ವರ್ಷ, ಉಃ ಚಾಲಕ
ಸಾಃ ತರನ್ನಳ್ಳಿ ,
ತಾಃ ಸೇಡಂ, ಜಿಃ ಕಲಬುರಗಿ

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೊ ಅಥವಾ ವಿಚಾರಣೆ ನಡೆಯಬೇಕಾ?

ಉಃ

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 13-03-2026 ಪ್ರ.ದ.ನ್ಯಾ.ದಂ. ಸೇಡಂ.